ಸಾಕ್ಷಿದಾರನನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 03.06.2025.

**ಪಾಟೀ ಸವಾಲು – ವಾದಿ ಪರಃ ವಕೀಲರಿಂದಃ**

ನನ್ನ ಸಾಕ್ಷಿ ಪ್ರಮಾಣ ಪತ್ರ ಬರೆಯಲು ಪ್ರತಿವಾದಿ ಮಾಹಿತಿ ನೀಡಿರುತ್ತಾರೆ. ನನಗೆ ವಾದಿಯರ ಪರಿಚಯ ಇರುವುದಿಲ್ಲಾ ಆದರೆ ಬಸವರಾಜನ ಪರಿಚಯ ಇರುತ್ತದೆ. ನಾನು ನ್ಯಾಯಾಲಯಕ್ಕೆ ಪ್ರತಿವಾದಿಯ ಜೊತೆಗೆ ಬಂದಿರುತ್ತೇನೆ. ನನಗೆ ಪ್ರತಿವಾದಿ ಸಾಕ್ಷಿ ಹೇಳಲು ಕೇಳಿದ್ದರಿಂದ ಬಂದಿರುತ್ತೇನೆ ಅಂದರೆ ಸರಿಯಲ್ಲಾ. ನ್ಯಾಯಾಲಯದಿಂದ ನನಗೆ ಸಾಕ್ಷಿ ಹೇಳಲು ನೋಟಿಸ ಬಂದಿರುವುದಿಲ್ಲಾ. ನಾನು ಮತ್ತು ಪ್ರತಿವಾದಿ ಅನ್ಯೂನ್ಯವಾಗಿ ಇರುವುದರಿಂದ ಅವರ ಪರವಾಗಿ ಸಾಕ್ಷಿ ಹೇಳಲು ಬಂದಿರುತ್ತೇನೆ ಅಂದರೆ ಸರಿಯಲ್ಲಾ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಏನು ಬರೆದಿದೆ ಅಂತಾ ನನಗೆ ಗೊತ್ತು. 1997 ನೆ ಸಾಲಿನಲ್ಲಿ ನಗರಸಭೆಯವರು ಯಾರ ಯಾರಿಗೆ ಎಷ್ಟು ನಿವೇಶನ ಕೊಟ್ಟಿದ್ದಾರೆ ಅಂತಾ ನನಗೆ ಮಾಹಿತಿ ಇರುವುದಿಲ್ಲಾ. 1997 ರಲ್ಲಿ ಪ್ರತಿವಾದಿಗೆ ನಿವೇಶನ ಮಂಜೂರಾದ ಬಗ್ಗೆ ನನಗೆ ಮಾಹಿತಿ ಇಲ್ಲಾ ಎಂದರೆ ಸರಿ. ನಿಡಿ-02 ಬರೆದು ಕೊಡುವಾಗ ಜುಲೈ 2002 ರಲ್ಲಿ ಬರೆದಿರುತ್ತಾರೆ. ದಿನಾಂಕಃ 28, 29 ಇರಬಹುದು. ನಿಡಿ-02 ಬರೆಯುವಾಗ ಪ್ರತಿವಾದಿ, ಗುಡ್ಡಪ್ಪ ಮಡಿವಾಳರ, ಶೇಖಪ್ಪ ಮಡಿವಾಳರ, ಬಸವರಾಜ ಕೊಪ್ಪದ ಮತ್ತು ನಾನು ಹಾಜರಿರುತ್ತೇವೆ. ಈ ಮೇಲಿನವರನ್ನು ಬಿಟ್ಟು ಬೇರೆ ಯಾರು ಹಾಜರಿರಲಿಲ್ಲಾ. ನಿಡಿ-02 ನ್ನು ಬರೆಯಲು 1ನೇ ವಾದಿಯ ಗಂಡ ಮಾಹಿತಿ ನೀಡಿರುತ್ತಾನೆ. ನಿಡಿ-02 ನ್ನು ಉಮೇಶ ಚೌದರಿ ಎಂಬುವವರು ಬರೆದಿರುತ್ತಾರೆ. ನಿಡಿ-02 ರಲ್ಲಿ ರೂ.14,200/- ಕಿಮ್ಮತ್ತು ಮಾಡಿರುತ್ತಾರೆ. ನಿಡಿ-02 ಬರೆಯುವಾಗ ಆಸ್ತಿಯ

ದಾಖಲೆಗಳನ್ನು ನಾನು ನೋಡಿರುತ್ತೇನೆ. ನಿಡಿ-02 ಬರೆಯುವಾಗ ಬಸವರಾಜ ಆದಾಪುರ ಅಂತಾ ಇದ್ದು ಆಸ್ತಿಯಲ್ಲಿ 20 ವರ್ಷ ಪರಾದಿನ ಮಾಡಬಾರದು ಅಂತಾ ಕರಾರು ಇತ್ತು ಎಂದರೆ ನಾನು ನೋಡಿಲ್ಲಾ ಎಂದು ನುಡಿಯತ್ತಾರೆ.

ನನಗೆ ದಾವಾ ಆಸ್ತಿ ನಂಬರ ಗೊತ್ತಿರುವುದಿಲ್ಲಾ. ನಿಡಿ-02 ರಲ್ಲಿ ಏನು ಬರೆದಿದೆ ಅಂತಾ ನನಗೆ ಮಾಹಿತಿ ಇಲ್ಲಾ ಅಂದರೆ ಸರಿಯಲ್ಲಾ. ನಿಡಿ-02 ನ್ನು ಪರಿಶೀಲಸದೆ ಇದ್ದರೂ ಸಹ ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ನಿಡಿ-02 ನ್ನು ಉಪನೋಂದಣಿ ಕಚೇರಿಯಲ್ಲಿ ನೋಂದ ಮಾಡಿರುವುದಿಲ್ಲಾ. ಬಸವರಾಜ ಮತ್ತು ಪ್ರತಿವಾದಿ ದೂರಿನ ಸಂಬಂಧಿಕರು ಇದ್ದು ಮತ್ತು ಬಸವರಾಜನಿಗೆ ಅಡಚಣೆ ಇರುವುದರಿಂದ ನೋಂದಣಿ ಬೇಡ ಎಂದು ನುಡಿದಿರುತ್ತಾರೆ. ಪ್ರತಿವಾದಿ ಮತ್ತು ಬಸವರಾಜ ಇಬ್ಬರು ಸಂಬಂಧಿಕರು ಇಲ್ಲದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ನಿಡಿ-02 ರಂತೆ ಯಾವುದೇ ಸಂಚಕಾರ ಪತ್ರ ಆಗದೇ ಇದ್ದರೂ ಸಹ ಪ್ರತಿವಾದಿ ಮತ್ತು ನಾವು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇವೆ ಅಂದರೆ ಸರಿಯಲ್ಲಾ. ವಾದಿಯರು 2002 ರಿಂದ ದಾವಾ ಆಸ್ತಿಯಲ್ಲಿ ಮನೆ ಕಟ್ಟಿಕೊಂಡು ಇವತ್ತಿನವರೆಗೂ ಅವರೇ ವಾಸವಾಗಿದ್ದಾರೆ ಅಂದರೆ ಸರಿಯಲ್ಲಾ. ನಿಡಿ-03 ನ್ನು ಬಸವರಾಜ ಇತನು ಪ್ರತಿವಾದಿಗೆ ಬರೆದುಕೊಟ್ಟಿರುತ್ತಾನೆ. ನಿಡಿ-03 ರನ್ನು ಬರೆಯುವಾಗ ಹುಣಸಿಮರದ ವಕೀಲರು ಹಾಜರಿದ್ದರು. ಶೇಖಪ್ಪ, ಗುಡ್ಡಪ್ಪ, ಈರಪ್ಪ, ಬಸವರಾಜ ಮತ್ತು ನಾನು ಮತ್ತು ಎಸ ಆರ ಶಿಂದೆ ಹಾಜರಿರುತ್ತೇವೆ. ನಿಡಿ-03 ರಲ್ಲಿ ಬರೆದ ವಿಷಯ ನನಗೆ ಗೊತ್ತಿದೆ. ದಾವಾ ಆಸ್ತಿಯ ಇತ್ತಿಚಿನ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲಾ.

ಪುರಸಭೆಯವರು ವಾದಿಯರ ಹೆಸರಿಗೆ ದಾವಾ ಆಸ್ತಿ ಮಾಡಿ ಕೊಟ್ಟಿದ್ದಾರೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಬಸವರಾಜ ಈತನು ಪ್ರತಿವಾದಿಗೆ ದಾವಾ ಆಸ್ತಿಯನ್ನು ಬಾಡಿಗೆ ನಾತೆಯಿಂದ ನೀಡಿರುತ್ತಾನೆ ಎಂದರೆ ಸರಿಯಲ್ಲಾ. ಬಸವರಾಜ ಈತನಿಗೆ ಬಾಡಿಗೆ ಪತ್ರ ಮಾಡಿಕೊಡುತ್ತೇವೆ ಅಂತಾ ನಂಬಿಸಿ ನೀಡಿ-02 ಮತ್ತು 03 ನ್ನು ಸೃಷ್ಟಿಮಾಡಿ ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

Sd/-
ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.